Mr. SPEAKER.—I have not allowed that.

ಶ್ರೀ ವಿ. ಎಂ. ದೇವ್.—ಅಲ್ಲಿ 16,218 ಕುರಿಗಳಿಗೆ ಡೋಸೇಜ್ ಮಾಡಲಾಗಿದೆ ಎಂತ ಹೇಳಿದ್ದಾರೆ. ಬಾಕಿ ಕುರಿಗಳ ಗತಿಯೇನು ?

ಶ್ರೀ ಎಂ. ವಿ. ಕೃಷ್ಣಪ್ಪ —ಎಲ್ಲ ಕುರಿಗಳಿಗೂ ರೋಗ ಬಂದಿಲ್ಲ. ರೋಗ ಬಂದಿದ್ದ ಕುರಿಗಳಿಗೆ ಮಾತ್ರ ಡೋಸೇಜ್ ಮಾಡಲಾಗಿದೆ. ಇದು ಅಂಟು ಜಾಡ್ಯವಲ್ಲ.

ಶ್ರೀ ಆರ್. ಕೆಂಚಪ್ಪ.—ವೆಟರಿನೆರಿ ಡಾಕ್ಟರುಗಳಿಗೆ ನರಿಯಾದ ಅನುಭವವಿಲ್ಲದೆ, ಈ ರೋಗ ಕಂಡುಹಿಡಿಯಲು ಬಾರದೆ ಇರುವುದು ಇಷ್ಟು ಕುರಿಗಳು ನತ್ತು ಹೋಗಲು ಕಾರಣವಾಯಿತಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಅವರು ಹೇಳುತ್ತಿರುವುದು ನರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಾಯಿಲೆಯಿಂದ ನತ್ತ ಕುರಿಗಳನ್ನು ಹೂಳುವಂತೆ ನಿರ್ಬಂಧ ಪಡಿಸಲಾಗುತ್ತದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ನಿರ್ಬಂಧ ಈಗಲೂ ಜಾರಿಯಲ್ಲಿ ಇದ್ದೇ ಇದೆ. ಸಾಮಾನ್ಯ ಕಾಯಿಲೆಯಿಂದ ನತ್ತ ಕುರಿಗಳ ಚರ್ಮವನ್ನು ಮಾತ್ರ ಸುಲಿದು ಕೊಳ್ಳುತ್ತಾರೆ. ಆ ಮಾಂಸವನ್ನು ನಾಯಿ—ನರಿಗಳು ಂದು ಹಾಕುತ್ತವೆ.

ಶ್ರೀ ಅಂಗಡಿ ಚನ್ನಬಸಪ್ಪ.—ನರಿಯಾದ ಆಹಾರವಿಲ್ಲದೆ ಕುರಿಗಳಿಗೆ ಇಂಥ ಪರಿಸ್ಥಿತಿ ಬರುತ್ತದೆಂದು ಹೇಳುತ್ತಾರೆ. ನರಿಯಾದ ಆಹಾರವನ್ನು ಈ ಪ್ರಾಣಿಗಳಿಗೆ ಒದಗಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ.ವಿ. ಕೃಷ್ಣಪ್ಪ.—ಪಾವಗಡ ತಾಲ್ಲೂಕು ಮೆ ೈಸೂರು ನಂಸ್ಥಾನದಲ್ಲಿ highly scarcity affected area. ಅಲ್ಲಿ ಕುರಿ ಹೆಚ್ಚಾಗಿ ಇವೆ. ಮಳೆ ಕಡಮೆಯಾದ ವರ್ಷದಲ್ಲಿ ಕುರಿಗಳಿಗೆ ಮೇವನ್ನು ಒದಗಿಸುವುದಕ್ಕಾಗುವುದಿಲ್ಲ ಸಾಯುವುದು ಮತ್ತೆ ಪ್ರಬಲವಾಗುವುದು. ಹೀಗೆ ಪೂರ್ವದಿಂದಲೂ ಅಭ್ಯಾಸವಾಗಿದೆ.

Sri N. O. SAMAJI (Spoke in Marathi)—.

ಶ್ರೀ ಎಂ. ವಿ. ಕೃಷ್ಣಪ್ಪ.—ಈ worm disease ಬಂದರೆ 15-20 ದಿವಸಗಳಲ್ಲಿ ಕುರಿ ನತ್ತು ಹೋಗುತ್ತದೆ. ಈ ರೋಗ ಪ್ರಾರಂಭವಾದ ಕೆಲವು ದಿವಸಗಳಿಗೇ ಮಧುಗಿರಿ ಡಾಕ್ಟರು ಹೋಗಿ, ಔಷಧಿಗಳನ್ನೆಲ್ಲ ಬೆಂಗಳೂರಿನಿಂದ ತರಿಸಿಕೊಂಡು ಚಿಕಿತ್ಸೆ ಪ್ರಾರಂಭ ಮಾಡಿದರು. 5-6 ತಿಂಗಳಲ್ಲಿ 400 ಕುರಿ ನತ್ತು ಹೋಗಿವೆ. ಈಗ ಹತೋಟಿಗೆ ತಂದಿವ್ವಾರೆ.

ಶ್ರೀ ಎಸ್. ವಿ. ರಾಮೇಗೌಡ.—ಕುರಿಗಳಿಗೆ ರೋಗ ಬರುವುದಕ್ಕೆ ಮೊದಲು dosage ಮಾಡಿದರೆ ಹೆಚ್ಚಾಗಿ ಸಾಯುವುದಿಲ್ಲವೆನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಂಸ್ಥಾನದಲ್ಲರುವ ಎಲ್ಲ ಕುರಿಗಳಿಗೂ ಡೋಸೇಜ್ ಮಾಡುವುದ ಕ್ಕಾಗುವುದಿಲ್ಲ, ಎಲ್ಲಿ ರೋಗ ಬರುತ್ತಿದೆಯೋ ಆ ಪ್ರದೇಶದಲ್ಲಿ ಮಾತ್ರ ಮಾಡಬಹುದು.

Sanction of Irrigation Loans in Gundlupet Taluk for the last Three Years.

*Q.—666. Smt. K. S. NAGARATHNAMMA (Gundlupet).—

Will the Government be pleased to state :—

(*a*) the number of ryots who have been sanctioned irrigation loans in Gundlupet Taluk for the last three years ;

(*b*) whether repayment by instalments is being made regularly ;

(*c*) whether they are aware that the ryots are being put to inconvenience due to failure of crops for the last 8 to 10 years and are therefore not in a position to repay their loans even in instalments ;

(*d*) whether they would take action to see that no penal interest is collected from such persons in distress ?

A.—**Sri M. V. KRISHNAPPA** (Minister for Revenue).—

(*a*)	(i)	1959-60 ...	...	23
	(ii)	1960-61 ...	...	129
	(iii)	1961-62 ...	...	16

(*b*) There have been defaults in re-payment of the instalments of 1959-60. So far as the loans granted during the subsequent year under the Liberalised Rules are concerned, the time for completion of well works sanctioned during 1960-61 has been extended upto 31st March 1963.

(*c*) No.

(*d*) If any individual cases where recovery of the instalments would cause severe hardship to the grantees are brought to the notice of the Local Officers, such cases will be examined on merits and relief granted wherever necessary.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—(ಇ)ಗೆ ಉತ್ತರವಾಗಿ 'ಗೊತ್ತಿಲ್ಲ' ಎಂದು ಹೇಳಿದ್ದೀರಿ. ಯಾವತರಹ ಸರ್ಕಾರಕ್ಕೆ ಗೊತ್ತಾಗುತ್ತದೆ, ಗೊತ್ತಾಗುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳಿಗೆ ಸಾಲಗಳನ್ನು ಬಹಳ liberal ಆಗಿ ಕೊಡುತ್ತೇವೆ. ಸಾಲಗಳನ್ನು ವಸೂಲ್ಮಾಡುವುದರಲ್ಲಿಯೂ ಅಷ್ಟೇ ಧಾರಾಳವಾಗಿದ್ದರೆ ಸಾಲ ವಸೂಲಾಗುವುದಿಲ್ಲ. ವಸೂಲು ಮಾಡದೆ ಇದ್ದರೆ, ಮುಂದೆ ಸಾಲ ಕೊಡುವುದಕ್ಕಾಗುವುದಿಲ್ಲ, ಈ ಪ್ರದೇಶದಲ್ಲಿ ಮಳೆ ಬೆಳೆ ಹೋಗಿದೆ ಎಂದು ಹೇಳುತ್ತೀರಿ. ಹಾಗೇನಾದರೂ ತೊಂದರೆ ಇದ್ದರೆ individual casesನಲ್ಲಿ ರಿಯಾಯಿತಿ ಕೊಡಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—(ಈ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ "ಅಂತಹ ಸಂದರ್ಭಗಳಲ್ಲಿ ಯುಕ್ತಾಯುಕ್ತತೆಗಳನ್ನು ಪರಿಶೀಲಿಸಲಾಗುವುದು" ಎಂದು ಹೇಳಿದ್ದೀರಿ. ಅಲ್ಲಿರುವ ಅಸಿಸ್ಟೆಂಟ್ ಕಮಿಷನರ್, ಡೆಪ್ಯುಟಿ ಕಮಿಷನರ್ ಎಲ್ಲರಿಗೂ ತಿಳಿಸಿದರೂ ಅವರು ಇದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಮುಂದಕ್ಕೆ ನಾವು ಮಾಡಬೇಕಾದ ಕಾರ್ಯಕ್ರಮವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳಿಗೆ ಕೊಡುವ ಸಾಲವನ್ನು ವಸೂಲು ಮಾಡುವ ಪ್ರಶ್ನೆ ಇದೆ. ಅಭಾವ ಪರಿಸ್ಥಿತಿ ಇದ್ದರೆ ಅದಕ್ಕೆ famine relief ಕೆಳಗೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ. ಅಭಾವ ಪರಿಸ್ಥಿತಿ ಇದೆ ಎಂದು declare ಆದ ವರ್ಷ ಸಾಲವನ್ನೂ ಡೆಪ್ಯುಟಿ ಕಮೀಷನರು ವಸೂಲ್ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಅಂಗಡಿ ಚನ್ನಬಸಪ್ಪ.—ಸರ್ಕಾರ ಹಣವನ್ನು ಮಂಜೂರ್ಮಾಡಿಸುವುದು ನೀರಾವರಿ ಬಾವಿಗಳಿಗಾಗಿ. Failure of crops ಎಂದು ಹೇಳಿದ್ದಾರೆ. ಬಾವಿಯಲ್ಲಿ ನೀರಿದ್ದು ಬೆಳೆ ಆಗಿದ್ದರೆ failure of crops ಹೇಗೆ ಆಯಿತು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಳೆಯಿಲ್ಲದೆ ಇದ್ದರೆ ಬಾವಿಗಳಲ್ಲಿ ನೀರು ಕೂಡ ಇರುವುದಿಲ್ಲ. ಒಂದು ವರ್ಷ ಮಳೆಹೋದರೆ ಬಾವಿಗಳಲ್ಲಿ ಅರ್ಧ ಭಾಗ ನೀರು ಇರುತ್ತದೆ, ಎರಡನೆಯ ವರ್ಷವೂ ಮಳೆ ಬೀಳದೆಹೋದರೆ ಬಾವಿಗಳಲ್ಲಿ ನೀರು ಇರುವುದಿಲ್ಲ.

ಶ್ರಿ ಕೆ. ಪಿ. ರೇವಣ್ಣಸಿದ್ದಪ್ಪ.—ನೀರಾವರಿ ಬಾವಿಗಳಿಗೆ ಕೊಡುವುದು ಮೂರು ಸಾವಿರ ರೂಪಾಯಿ. ಕೆಲವು ಪ್ರದೇಶಗಳಲ್ಲಿ ಏಳೆಂಟು ಸಾವಿರ ರೂಪಾಯಿ ಖರ್ಚಾಗುತ್ತದೆ. ಸರ್ಕಾರ ಕೊಡುವ ಹಣವಲ್ಲಿ ಬಾವಿ ಪೂರ್ತಿಯಾಗದೇ ಹಾಗೆಯೇ ಇದ್ದರೆ ಸಾಲವನ್ನು ಹೇಗೆ ವಸೂಲ್ಮಾಡುತ್ತಾರೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲು ಒಂದು ಸಾವಿರ ರೂಪಾಯಿ ಕೊಡುತ್ತಿದ್ದರು. ಈಚೆಗೆ ಮೂರು ಸಾವಿರ ಮಾಡಿದೆ. ಅನೇಕ ಕಡೆ ಒಂದು ಬಾವಿಗೆ ಏಳೆಂಟು ಸಾವಿರ ರೂಪಾಯಿ ಬೇಕಾಗುತ್ತದೆ. ಕೆಲವು ಪ್ರದೇಶಗಳಲ್ಲಿ ಮೂರುಸಾವಿರ ರೂಪಾಯಿನಲ್ಲಿ ಮಾಡಿಕೊಳ್ಳಬಹುದು, ಅರ್ಧ ಭಾಗ ಸರ್ಕಾರದ ಹಣದಿಂದ, ಉಳಿದರ್ಧಭಾಗ ಇತರ ಸಹಾಯದಿಂದ ಅರೇಳುಸಾವಿರ ರೂಪಾಯಿ ಖರ್ಚುಮಾಡಿ ಬಾವಿ ತೆಗೆದರೆ, ಆ ಬಾವಿಯ ಆಧಾರದಮೇಲೆ ಸಾಲ ಕೊಡುವುದರಿಂದ ಸಾಲವನ್ನು ವಸೂಲ್ಮಾಡುವುದಕ್ಕೆ ತೊಂದರೆಯಾಗುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಸಾಲದ ಹಣವನ್ನು ಕೊಡುವುದು ನಿಧಾನವಾದರೆ, penal interest ವಸೂಲ್ಮಾಡುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹೀಗಾದರೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ರೈತರಿಗೆ ಏನು ಪರಿಹಾರ ಕೊಟ್ಟಹಾಗೆ ಆಯಿತು ? ಇನ್ನಮುಂದಕ್ಕಾದರೂ ಪರಿಹಾರ ಕಲ್ಪಿಸಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಾವು ಈ ಸಾಲವನ್ನು ಕೊಟ್ಟಿರುವುದು ಬಹಳ ಕಡಮೆ ಬಡ್ಡಿ ದರದಲ್ಲಿ. ಶೇಕಡ ಮೂರು ರೂಪಾಯಿನಂತೆ ಕೊಟ್ಟಿದ್ದೇವೆ. ಸಾಲ ವಾಪಸು ಸರಿಯಾಗಿ ಕೊಡದೆ ಇದ್ದರೆ penal interest ಹಾಕುತ್ತೇವೆ. ಇಲ್ಲದೆ ಇದ್ದರೆ ಸಾಲದ ಹಣ ವಸೂಲಾಗುವುದಿಲ್ಲ. penal interest ಇರುವುದರಿಂದ ಏನಾದರೂ ಮಾಡಿ ಸಾಲ ತೀರಿಸುವ ಪ್ರಯತ್ನ ಮಾಡುತ್ತಾರೆ. ವಿಶಿಷ್ಟ ಸನ್ನಿವೇಶಗಳೇನಾದರೂ ಇದ್ದು ನನಗೆ ಬರೆದರೆ, ಅಂಥ ಪರಿಸ್ಥಿತಿಯಲ್ಲಿ ಡೆಪ್ಯುಟಿ ಕಮಿಷನರಿಗೆ ಬರೆದು ಮಳೆಬೆಳೆಗಳಿಲ್ಲದೆ ಇವ್ಯಾಗ ರಿಯಾಯಿತಿ ತೋರಿಸಲು ಕಳಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಗುಂಡ್ಲುಪೇಟೆ ತಾಲ್ಲೂಕಿನ ರೈತರಿಗೆ ಸರ್ಕಾರ ಇದುವರೆಗೂ ಮಾಡಿರತಕ್ಕ ಉದಾರವಾದ ಸಹಾಯದ ಜೊತೆಗೆ ದೊಡ್ಡ ಮನಸ್ಸುಮಾಡಿ ಈಗ ಕೇಳಿರುವ ಸಹಾಯವನ್ನೂ ಒದಗಿಸಿ ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ —ಖಂಡಿತವಾಗಿ ಮಾಡುತ್ತೇವೆ.

ಶ್ರೀ ಅಂಗಡಿ ಚನ್ನಬಸಪ್ಪ.—ಇಂಥ ಉದ್ದೇಶಗಳಿಗೆ ಕೊಟ್ಟ ಸಾಲಗಳಮೇಲೆ penal interest ಹಾಕಿದರೆ, ತಮಗೂ ಮತ್ತು ಬಹಳ ಬಡ್ಡಿ ವಸೂಲ್ಮಾಡತಕ್ಕ ಮಾರವಾಡಿಗಳಿಗೂ ಏನಾದರೂ ಭೇದ ಏದೆಯೇ ಸ್ವಾಮಿ ?

Sri M. V. KRISHNAPPA.—3 per cent interest, is the lowest percentage of interest perhaps.

Sri ANGADI CHANNABASAPPA.—It ranges from 3 to 5 per cent.

Sri M. V. KRISHNAPPA.—It is three per cent under the liberalised scheme If the farmer gets 3,000 rupees, for digging a well, it is to be replaid in ten instalments at the rate of 3 per cent. ನಾವು ಕೊಡುವುದು ಶೇಕಡ 5, ರೈತರಿಂದ ತೆಗೆದುಕೊಳ್ಳುವುದು ಶೇಕಡ 3, ಶೇಕಡ 2 ನಷ್ಟವಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಚಕ್ಕೆ ಕಂಟ್ರಾಕ್ಟ್ಮಾಡಿ default ಆಗಿರುವವರಿಗೆ penal interest ಹಾಕದೆ ಬಡ ರೈತರಮೇಲೆ ಮಾತ್ರ ಹಾಕುತ್ತೀರಿ. ಇದರಿಂದ ರೈತರಿಗೆ ತೊಂದರೆಯಾಗಿರುವುದರಿಂದ ಇದನ್ನು ತೆಗೆದುಹಾಕುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—Penal interest ಶೇಕಡ 9 ಕೊಡುತ್ತಾರೆ. ಅದು ಜಾಸ್ತಿಯಾಗುವುದಿಲ್ಲ. ಮೂರುಕೋಟಿ ರೂಪಾಯಿಗಳನ್ನು ಸರ್ಕಾರದವರು ಈ ವರ್ಷ ಕೊಡುತ್ತಿದ್ದಾರೆ, ಬಾವಿಗಳನ್ನು ತೆಗೆಯುವುದಕ್ಕಾಗಿ. Penal interest ಇಲ್ಲದಿದ್ದರೆ, ವಸೂಲಾಗುವುದಕ್ಕೆ ತೊಂದರೆಯಾಗುತ್ತದೆ.

ಶ್ರೀ ಜಿ. ವಿ. ಗೌಡ.—1961-62ರಲ್ಲಿ ಪ್ರವಾಹದ ಹಾವಳಿಯಿಂದ ಅಭಾವ ಪರಿಸ್ಥಿತಿಯುಂಟಾಯಿತು. ಅಲ್ಲದೆ 35 per cent surcharge, cent per cent surchrage ರೈತರು ಕೊಡಬೇಕಾಗಿರುವುದರಿಂದ 1962-63ಕ್ಕೆ ರಿಯಾಯಿತಿಯನ್ನು ಮುಂದುವರಿಸುವುದಕ್ಕೆ ತಾವು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಲ್ಲೆಲ್ಲಿ ರೈತರಿಗೆ ತೊಂದರೆ ಇದೆಯೋ ಅಲ್ಲಲ್ಲಿ ಪರಿಶೀಲನೆ ಮಾಡುತ್ತೇವೆ.

SHORT NOTICE QUESTION AND ANSWER

Ban of Public Meetings in Bangalore and Mysore during March and April, 1963.

Q.—25. **Sri B. P. KADAM** (Karwar) [on behalf of SRI S. RAJAGOPAL (KolarGold Fields)].—

Will the Government be pleased to state :—

(*a*) whether it is a fact that a public meeting was banned on the 31st March 1963 arranged in the Subhas Nagar Grounds, Bangalore, under Section 45 of the Mysore Police Act ;